ನೋಡುತ್ತಿದ್ದುದು ನನಗೆ ಕಾಣಿಸುತ್ತಿತ್ತು. ಒಂದು ದಿನ ಅವನನ್ನೂ ಆಟಕ್ಕೆ ಕರೆದೆ. ಆದರೆ, ಅವನು ನನ್ನ ಮಾತಿಗೆ ಸೊಪ್ಪುಹಾಕದೆ, ಮಾಸಲು ಮೋಡಗಳ ನಡುವೆ ಮರೆಯಾಗುವ ಚಂದ್ರನಂತೆ ಈಚಲು ಮರದ ಮರೆಗೆ ಸರಿದುಹೋದ. ಹೀಗೆ ಎರಡು ಮೂರು ಸಲ ಆಯಿತು. ಕೊನೆಗೆ ಅವನನ್ನು ಆಟಕ್ಕೆ ಕರೆಯುವುದನ್ನು ಬಿಟ್ಟುಬಿಟ್ಟೆ.

* * *

ಅಂದು ಚಳಿಗಾಲದ ಆರಂಭದ ದಿನದ ಒಂದು ಮಬ್ಬು ಸಂಜೆ. ಇಡೀ ಊರು ಚಳಿಯ ಹೊದಿಕೆಯಲ್ಲಿ ಅಡಗಿತ್ತು. ನಾನು ಸ್ಕೂಲು ಮುಗಿಸಿಕೊಂಡು ಮನೆಗೆ ಬಂದಿದ್ದೆ. ಅಂದು ಜಯರಾಮ ಶಾಲೆಗೆ ಬಂದಿರಲಿಲ್ಲ. ನಮ್ಮ ತಂದೆ ಜಿಲ್ಲಾ ಕೇಂದ್ರಕ್ಕೆ ಕಾರ್ಯನಿಮಿತ್ತವಾಗಿ ಹೋಗಿದ್ದರು. ನಾನು ಮನೆಯ ಹೊರಗಡೆ ಜಗಲಿಯ ಮೇಲೆ ನಿಂತಿದ್ದೆ. ಒಂದು ದೊಡ್ಡ ಗುಂಪಿನ ನಡುವೆ ಇಬ್ಬರು ಪೋಲೀಸರು ಯಾರನ್ನೋ ಎಳೆದು ತರುತ್ತಿದ್ದರು. ಗುಂಪಿನ ಸದ್ದು ಜೋರಾಗಿತ್ತು.

'ಇವನನ್ನು ಬಿಡಬ್ಯಾಡರಿ'

'ಇವನಿಗೆ ಸರಿಯಾಗಿ ಬುದ್ಧಿ ಕಲಿಸಿ'

'ಇವನನ್ನು ಸ್ಟೇಷನ್‌ಗೆ ಎಳೆದುಕೊಂಡು ಹೋಗಿ'

ಎಂದು ತರಾವರಿ ಮಾತುಗಳು ಗುಂಪಿನಿಂದ ಕೇಳಿಬರುತ್ತಿದ್ದವು. ಕುತೂಹಲದಿಂದ ಪೋಲೀಸರು ಯಾರನ್ನು ಎಳೆದು ತರುತ್ತಿದ್ದಾರೆ ಎಂದು ನೋಡಿದೆ. ನೋಡಿದರೆ ಜಯರಾಮನ ತಂದೆ ದೊಡ್ಡಹನುಮ. ಅವನ ಎರಡೂ ಕೈಗಳನ್ನು ಹಿಂದಕ್ಕೆ ಕಟ್ಟಿ, ಯುದ್ಧದಲ್ಲಿ ಸಿಕ್ಕಿದ ಸೆರೆಯಾಳಿನಂತೆ ಅವನನ್ನು ಎಳೆದು ತರುತ್ತಿದ್ದರು. ಅವನ ಮುಡಿ ಬಿಚ್ಚಿಹೋಗಿ ಕೂದಲೆಲ್ಲಾ ಸಂಜೆಯ ಗಾಳಿಗೆ ಹಾರಾಡುತ್ತಿತ್ತು. ತೊಟ್ಟಿದ್ದ ಅಂಗಿ ಎರಡು-ಮೂರು ಭಾಗಗಳಾಗಿ ಹರಿದುಹೋಗಿತ್ತು. ದೇಹದ ಮೇಲೆ ಅಲ್ಲಲ್ಲಿ ರಕ್ತ ಒಸರಿದ ಹಸಿ ಗಾಯಗಳು ಎದ್ದು ಕಾಣುತ್ತಿದ್ದವು. ಆದರೆ, ಅವನು ಅನುಭವಿಸುತ್ತಿದ್ದ ನೋವನ್ನು ಆ ಗಾಯಗಳು ಹೇಳುತ್ತಿರಲಿಲ್ಲ!

'ಇವತ್ತು ನಮ್ಮ ಕಸಿಗಿಡದಿಂದ ಮಾವಿನಕಾಯಿ ಇಳಿಸೋವನೆ! ಎಷ್ಟು ದಿನದಿಂದ ಕದ್ದು ಕಾಯಿ ಕೀಳ್ತಿದ್ದನೋ?' ಎಂದು ಗುಂಪಿನಿಂದ ಒಂದು ಧ್ವನಿ ಬಂದಿತು.

'ಅಯ್ಯೋ, ಮೊನ್ನೆ ನಮ್ಮ ತೆಂಗಿನ ತೋಟದಾಗೆ ಹತ್ತಾರು ಎಳನೀರು ಗೊನೆಯನ್ನೇ ಯಾರೋ ಇಳಿಸಿ ಸಾಗಿಸವರೆ! ಇವನ್ನ ಬಿಟ್ಟರೆ ಇನ್ನಾರು ಇಳಿಸ್ತಾರೆ! ಇವನೇ ಆ ಕಳ್ಳ' ಎಂದಿತು ಇನ್ನೊಂದು ಧ್ವನಿ.

ಪೋಲೀಸರು ಗುಂಪಿನ ಮಾತಿನಿಂದ ಪ್ರಚೋದಿತರಾದಂತೆ ಕಂಡು ಬಂದರು. ದೊಡ್ಡಹನುಮನ ಎರಡೂ ರಟ್ಟೆಗಳನ್ನು ಹಿಡಿದು ಅವನನ್ನು ಮೃಗವನ್ನು ಎಳೆದೊಯ್ಯುವಂತೆ ಪೋಲೀಸ್ ಸ್ಟೇಷನ್‌ಗೆ ಎಳೆದೊಯ್ಯುತ್ತಿದ್ದರು.

ನನಗೆ ಕಣ್ಣಿನಲ್ಲಿ ನೀರು ತುಂಬಿಕೊಂಡಿತು. ಆ ಕ್ಷಣದಲ್ಲಿ ಜಗುಲಿ ಇಳಿದು ಅಸಹಾಯಕಳಾಗಿ ನೋಡುವುದನ್ನು ಬಿಟ್ಟರೆ, ಇನ್ನಾವುದೇ ಆಯ್ಕೆ ನನಗಿರಲಿಲ್ಲ! ದೊಡ್ಡಹನುಮನ ಮುಖದಲ್ಲಿದ್ದ ಗಾಢ ಮೌನ ಮತ್ತು ನಾನು ಕದ್ದಿಲ್ಲವೆಂಬ ಆತ್ಮವಿಶ್ವಾಸ ಎದ್ದು ಕಾಣುತ್ತಿತ್ತು. ನನಗೆ ಅವನ ಮೌನವನ್ನು ಕಂಡು ಕೊಂಚ ದಿಗಿಲಾಯಿತು.

'ಸತ್ತಮ್ಮನ ಮೇಲಾಣೆ, ನಾನು ಕದ್ದಿಲ್ಲ! ನನ್ನ ಮಾತನ್ನು ನಂಬಿ' ಎನ್ನುವ ದೊಡ್ಡಹನುಮನ ಮಾತುಗಳು ಗುಂಪಿನಲ್ಲಿ ಯಾರ ಕಿವಿಗೂ ತಾಕಲಿಲ್ಲ. ಮಾನವತೆಯ ಬಾಗಿಲಲ್ಲಿ ನಿಂತು ದೊಡ್ಡಹನುಮ ಮಾಡಿದ ಪ್ರಾರ್ಥನೆಯೆಲ್ಲಾ ನಿಷ್ಫಲವಾಗಿತ್ತು. ಗುಂಪಿನ ನಡುವೆ ಗೆದ್ದವನಂತೆ ತಲೆಯೆತ್ತಿ ಬರುತ್ತಿದ್ದ ದೊಡ್ಡಹನುಮ ಒಮ್ಮೊಮ್ಮೆ ಹಿಂದಿರುಗಿ ನೋಡುತ್ತಿದ್ದ. ಅವನ ಕಣ್ಣುಗಳು ಯಾರನ್ನೋ ಹುಡುಕುತ್ತಿದ್ದವು.

ದೊಡ್ಡಹನುಮ ನೋಡುತ್ತಿದ್ದ ಕಡೆಗೆ ನಾನೂ ತಿರುಗಿ ನೋಡಿದೆ. ದೂರದಲ್ಲಿ ಜಯರಾಮ ಬರುತ್ತಿದ್ದ. ಅವನ ಕಣ್ಣು ನೀರಿನಲ್ಲಿ ಮುಳುಗಿದ್ದವು. ತನ್ನ ತಂದೆ ಅನುಭವಿಸುತ್ತಿದ್ದ ನೋವು, ಅವಮಾನ ಅವನನ್ನು ಹಿಂಡಿ ಹಿಪ್ಪೆಕಾಯಿ ಮಾಡಿತ್ತು. ತಂದೆಯ ದುಡಿಮೆಯಿಂದ ಬಾಳಿ ಬದುಕುತ್ತಿದ್ದ ಜಯರಾಮನ ಜಗತ್ತು ಕುಸಿಯತೊಡಗಿತ್ತು. ಅಷ್ಟರಲ್ಲಿ ಗುಂಪಿನ ನಡುವೆ ಒಬ್ಬ ದೊಡ್ಡಹನುಮನ ಬೆನ್ನಿಗೆ ಬಲವಾಗಿ ಗುದ್ದಿದ. ಆ ಗುದ್ದಿದ ಶಬ್ದ ಎಷ್ಟು ಜೋರಾಗಿತ್ತೆಂದರೆ, ನಗಾರಿ ಬಾರಿಸಿದಂತೆ ಕೇಳಿಸಿತು! ಆ ಏಟಿಗೆ ದೊಡ್ಡಹನುಮ ಮುಂದಕ್ಕೆ ಮುಗ್ಗರಿಸಿದರೂ ಬೀಳದೆ ಹೊಡೆದವನನ್ನು ಹಿಂದಿರುಗಿ ನೋಡಿದ. ಅವನ ಕಣ್ಣುಗಳು ಧಗ ಧಗ ಉರಿಯುತ್ತಿದ್ದವು. ಅವನ ನೋಟಕ್ಕೆ ಬೆಚ್ಚಿದ ಗುಂಪು ಒಂದು ಗಳಿಗೆ ಹಿಂದಕ್ಕೆ ಸರಿಯಿತು.